# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 363 (408)

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 10.12.20205

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ಜಮೀನು ಪೌತಿ ಖಾತೆಯಾಗದೆ ಮೃತರ ಹೆಸರಿನಲ್ಲೇ ಇವೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಆಧಾರ್ ಸೀಡಿಂಗ್ ಅಭಿಯಾನದಡಿ ಪಹಣಿಗಳಿಗೆ ಆಧಾರ್ ಜೋಡಣೆ ಕಾರ್ಯ ಮಾಡುವಾಗ ಮೃತ ಖಾತೆದಾರ ಎಂದು ಒಟ್ಟು 50,23,308 ಪಹಣಿಗಳನ್ನು ಗುರುತಿಸಲಾಗಿರುತ್ತದೆ. ಇವುಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಒಟ್ಟು 5,69,744 ವಹಿವಾಟುಗಳನ್ನು ಭೂಮಿ ಕಿಯೋಸ್ಕ್ ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಜೂನ್ 2025 ರಿಂದ ಒಟ್ಟು 2,41,622 ವಹಿವಾಟುಗಳನ್ನು ಇ-ಪೌತಿ ತಂತ್ರಾಂಶದ ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಪ್ರಸ್ತುತ 42,11,942 ಪಹಣಿಗಳು ಪೌತಿ ಖಾತೆ ಮಾಡಲು ಬಾಕಿ ಇರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| (ಆ) | ಮೃತರ ಹೆಸರಿನಲೇ ಇರುವ ಕಾರಣ ಸೌಲಭ್ಯ ಸಿಗದೆ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಪೌತಿ ಖಾತೆ ಆಂದೋಲನ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು: | ಬಂದಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019(ಇ), ದಿನಾಂಕ: 17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019 (ಇ), ದಿನಾಂಕ: 10.01.2024ರಂತೆ ಪೌತಿ/ವಾರಸಾ ಖಾತೆ ಆಂದೋಲನವನ್ನು ನಡೆಸಲು ಸರ್ಕಾರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಪೌತಿ ಖಾತೆಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪೌತಿ ಖಾತೆಗೆ ಅರ್ಜಿ ಸ್ವೀಕರಿಸಲು ಬೇಕಾದ ದಾಖಲೆಗಳನ್ನು ಸಹ ಸರಳೀಕರಣಗೊಳಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಎಂಆರ್‌ಆರ್ 2025, ದಿನಾಂಕ: 21.04.2025ರಂತೆ ಮರಣ ಹೊಂದಿದ ಖಾತೆದಾರರ ವಾರಸುದಾರರ ಹೆಸರಿಗೆ ಖಾತಾ ಪಹಣಿ ಇಂಡೀಕರಣ ಮಾಡುವ ನಿಟ್ಟಿನಲ್ಲಿ ಕಂದಾಯ ಇಲಾಖೆಯ ಮೂಲಕ ಇ-ಪೌತಿ ತಂತ್ರಾಂಶವನ್ನು ನೀಡಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಮರಣ ಹೊಂದಿದ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ, ಮರಣ ಪ್ರಮಾಣ |

| | | |
|---|---|---|
| | | ಪತ್ರ & ಇತರೆ ದಾಖಲೆಗಳನ್ನು ಪಡೆದು ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಇ) | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಹಣಿಯಲ್ಲಿ ತಾಂತ್ರಿಕ ಕಾರಣ/ಕಣ್ತಪ್ಪಿನಿಂದ ಆಗುವ ತಪ್ಪುಗಳ ತಿದ್ದುಪಡಿಗಾಗಿ ಬರುವ ಅರ್ಜಿಗಳನ್ನು ಅನಗತ್ಯವಾಗಿ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಪಹಣಿ ತಿದ್ದುಪಡಿಗಳು ತಾಂತ್ರಿಕ ಕಾರಣ/ಕಣ್ತಪ್ಪಿನಿಂದ ಆಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ಹಾಗೂ ಜಿಲ್ಲಾ ಭೂಮಿ ಸಮಾಲೋಚಕರು ಸಮನ್ವಯ ಮಾಡಿಕೊಂಡು ಬಗೆಹರಿಸಿರುತ್ತಾರೆ. ಅಗತ್ಯವಿದ್ದಲ್ಲಿ ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ತಿದ್ದುಪಡಿ ಆದೇಶ ಮಾಡಲಾಗುತ್ತದೆ. ಯಾವುದೇ ಅನಗತ್ಯ ವಿಳಂಬ ಮಾಡುತ್ತಿರುವುದಿಲ್ಲ. |
| (ಈ) | ಕಳೆದ ಐದು ವರ್ಷಗಳಲ್ಲಿ ಈ ರೀತಿ ತಿದ್ದುಪಡಿಗಾಗಿ ಉಪ ವಿಭಾಗಾಧಿಕಾರಿಗಳಿಗೆ ಬಂದ ಅರ್ಜಿಗಳು ಎಷ್ಟು; ತಿದ್ದುಪಡಿ ಮಾಡಿದ ಹಾಗೂ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು? (ಉಪ ವಿಭಾಗಾಧಿಕಾರಿಗಳ ಕಾರ್ಯಾಲಯವಾರು ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಉಪ ವಿಭಾಗಾಧಿಕಾರಿಗಳ ಕಛೇರಿಗಳಲ್ಲಿ ಪಹಣಿ ತಿದ್ದುಪಡಿಗೆ ಸಂಬಂಧಿಸಿದಂತೆ ಸ್ವೀಕೃತಿ, ವಿಲೇವಾರಿ ಹಾಗೂ ಬಾಕಿ ಇರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ. |

| ಜಿಲ್ಲೆಯ ಹೆಸರು | ಉಪ ವಿಭಾಗಗಳು | ಸ್ವೀಕೃತಿ | ವಿಲೇವಾರಿ | ಬಾಕಿ |
|---|---|---|---|---|
| ಬೆಂಗಳೂರು ನಗರ ಜಿಲ್ಲೆ | ಬೆಂಗಳೂರು ಉತ್ತರ ಉಪವಿಭಾಗ ವ್ಯಾಪ್ತಿಯಲ್ಲಿ | 8886 | 8096 | 790 |
| | ಬೆಂಗಳೂರು ದಕ್ಷಿಣ ಉಪವಿಭಾಗ ವ್ಯಾಪ್ತಿಯಲ್ಲಿ | 3987 | 3662 | 325 |
| | **ಒಟ್ಟು** | **12873** | **11758** | **1115** |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ದೊಡ್ಡಬಳ್ಳಾಪುರ ಉಪ ವಿಭಾಗ | **9150** | **8910** | **240** |

**ಸಂ: ಕಂಇ 180 ಟಿಆರ್ಎಂ 2025** (1981221)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ

| Sl No | District | Total RTCs marked as deceased during Aadhar seeding | Total pauthi Transactions Disposed through Bhoomi Kiosk | Total pauthi Transactions Disposed through e-pouthi | Total pauthi Transactions Disposed | Total Survey Number pending for pouthi mutations |
|---|---|---|---|---|---|---|
| 1 | Bagalkot | 56443 | 15540 | 3946 | 19486 | 36957 |
| 2 | BALLARI | 57217 | 9768 | 6639 | 16407 | 40810 |
| 3 | BELAGAVI | 472927 | 55539 | 11449 | 66988 | 405939 |
| 4 | BENGALURU RURAL | 80318 | 13298 | 5720 | 19018 | 61300 |
| 5 | Bengaluru South | 179208 | 14285 | 6011 | 20296 | 158912 |
| 6 | BENGALURU URBAN | 27551 | 5615 | 337 | 5952 | 21599 |
| 7 | Bidar | 58787 | 12751 | 8215 | 20966 | 37821 |
| 8 | Chamarajanagara | 123507 | 9958 | 3474 | 13432 | 110075 |
| 9 | Chikballapur | 257179 | 13183 | 5348 | 18531 | 238648 |
| 10 | CHIKKAMAGALURU | 99196 | 13722 | 10291 | 24013 | 75183 |
| 11 | Chitradurga | 201363 | 18936 | 9445 | 28381 | 172982 |
| 12 | Dakshina Kannada | 99163 | 17274 | 2871 | 20145 | 79018 |
| 13 | Davanagere | 82763 | 14536 | 5889 | 20425 | 62338 |
| 14 | Dharwad | 57003 | 16457 | 6761 | 23218 | 33785 |
| 15 | Gadag | 52399 | 11836 | 4693 | 16529 | 35870 |
| 16 | Hassan | 267010 | 24192 | 10351 | 34543 | 232467 |
| 17 | Haveri | 97722 | 16493 | 6010 | 22503 | 75219 |
| 18 | KALABURAGI | 82894 | 21031 | 9193 | 30224 | 52670 |
| 19 | Kodagu | 270807 | 6924 | 1789 | 8713 | 262094 |
| 20 | Kolar | 282868 | 17325 | 8789 | 26114 | 256754 |
| 21 | koppal | 72215 | 13328 | 7766 | 21094 | 51121 |
| 22 | Mandya | 390649 | 35927 | 25105 | 61032 | 329617 |
| 23 | MYSURU | 195182 | 22123 | 10865 | 32988 | 162194 |
| 24 | Raichur | 79473 | 20139 | 7174 | 27313 | 52160 |
| 25 | SHIVAMOGGA | 87476 | 14437 | 10302 | 24739 | 62737 |
| 26 | TUMAKURU | 578051 | 56294 | 25717 | 82011 | 496040 |
| 27 | Udupi | 296054 | 17825 | 4951 | 22776 | 273278 |
| 28 | Uttar Kannada | 187396 | 17265 | 8186 | 25451 | 161945 |
| 29 | Vijayanagara | 125828 | 12050 | 6540 | 18590 | 107238 |
| 30 | VIJAYAPURA | 33030 | 18333 | 3418 | 21751 | 11279 |
| 31 | Yadgir | 71629 | 13360 | 4377 | 17737 | 53892 |
| **Total** | | **5023308** | **569744** | **241622** | **811366** | **4211942** |